ಏನಾದರೂ ಗಡಿಬಿಡಿ ಮಾಡಿ ತೇಪೆಯನ್ನು ಜೋಡಿಸುವ ಕರಾರುಗಳನ್ನು ಮಾಡಿಕೊಂಡರೆ, ನನ್ನ ಉದ್ದೇಶವು ಸಫಲವಾಗಲಾರದು. ಆದರೆ, ಈ ಕರಾರುಗಳು ಸತ್ಯಾಧಿಷ್ಠಾನವಿದ್ದು ಗಟ್ಟಿಮುಟ್ಟಾಗಿರಬೇಕು. ಅಸ್ಪೃಶ್ಯತೆಯನ್ನು ಸಮೂಲ ನಾಶಮಾಡುವ ಇಚ್ಛೆ ಹಿಂದೂ ಮುಂದಾಳುಗಳಿಗೆ ಇಲ್ಲದಿದ್ದರೆ, ಅವರು ಏನೂ ಸಂಕೋಚವನ್ನು ತಾಳದೆ ನನ್ನನ್ನು ಬಲಿಗೊಡಬೇಕು.

ಸಂಯುಕ್ತ ಮತದಾರ ಸಂಘದ ವಿರುದ್ಧವಿದ್ದ ಜನರ ಮೇಲೆ ಯಾವ ಬಗೆಯ ಒತ್ತಾಯವೂ ಆಗಕೂಡದು. ವಿರೋಧಕರ ಹೃದ್ಗತವನ್ನು ನಾನು ಅರಿತಿರುವೆ. ನನ್ನಲ್ಲಿ ಅವಿಶ್ವಾಸವನ್ನು ತಾಳಲು ಅವರಿಗೆ ಅಧಿಕಾರವಿದೆ. ಅಸ್ಪೃಶ್ಯರನ್ನು ನಾಶಕ್ಕೆ ನೂಕುವ ಹೀನ ಕೃತ್ಯಗಳನ್ನೆಸಗುತ್ತಿರುವ ಜಾತಿಯವನೇ ನಾನಲ್ಲವೇ? ಹೀಗಿದ್ದೂ ಅವರು ಇನ್ನೂ ನಮ್ಮ ಸಮಾಜದಲ್ಲಿದ್ದುದೇ ಆಶ್ಚರ್ಯ. ಅವರ ವಿರೋಧವು ಸಮರ್ಥನೀಯವಿದ್ದರೂ ಅವರೊಂದು ತಪ್ಪು ಮಾಡುತ್ತಿದ್ದಾರೆ. ಇಂದು ಅವರು ಮನಸ್ಸು ಮಾಡಿದರೆ ಹಿಂದೂಗಳಿಂದ ಬೇರೆಯಾಗಬಹುದು. ತಮ್ಮದೊಂದು ವರ್ಗವನ್ನೇ ನಿರ್ಮಿಸಬಹುದು. ಹೀಗೆ ಮಾಡುವುದರಿಂದ ಅವರ ಹಿತ ಸಾಧಿಸುತ್ತಿದ್ದರೆ ನಾನು ಅಲಕ್ಷಿಸಬಹುದಿತ್ತು. ಆದರೆ, ಅವರನ್ನು ಸವರ್ಣ ಹಿಂದೂಗಳಿಂದ ಬೇರ್ಪಡಿಸುವುದು ಶಕ್ಯವೇ ಇಲ್ಲ. ಅವರ ಹಿತ ಸಂಬಂಧಗಳು ಹಾಸುಹೊಕ್ಕುಗಳಾಗಿವೆ. ಯಾರ ಮಧ್ಯದಲ್ಲಿ ಅವರು ವಾಸಿಸುವರೋ, ಯಾರ ಸಲುವಾಗಿ ಅವರು ಬಾಳುವರೋ ಅವರಿಂದ ಅವರನ್ನು ಬೇರ್ಪಡಿಸುವ ಬಗೆ ಹೇಗೆ? ಅವಿಭಕ್ತ ಕುಟುಂಬದಲ್ಲಿಯ ಒಂದು ಘಟಕ ಅವರು. ಇಂದು ಅವರು ಯಾವ ಧರ್ಮದಲ್ಲಿರುವರೋ ಆ ಹಿಂದೂಧರ್ಮದ ವಿರುದ್ಧ ಬಂಡೆಬ್ಬಿಸಿರುವರು. ಹಿಂದೂ ಧರ್ಮವನ್ನೇ ತ್ಯಾಗ ಮಾಡಲು ಸಿದ್ಧರಾಗಿರುವರು. ಇದರ ಮೂಲವೇನಿದೆಯೆಂಬುದನ್ನು ನಾನು ಬಲ್ಲೆ. ಹಿಂದೂ ಧರ್ಮದಲ್ಲಿಯ ಕೆಲ ಅನಿರ್ವಚನೀಯ ತತ್ವಗಳು ಮತ್ತು ಅನುಭವಗಳು ಅವರನ್ನು ಧರ್ಮಾಂತರ ಮಾಡಗೊಡಲಾರವು. ಯಾರಿಗೆ ಈ ತತ್ವಗಳ ಪೂರ್ಣ ಅನುಭವವಿರುವುದೋ ಅವರು ಅಸ್ಪೃಶ್ಯರನ್ನು ಹಿಂದೂ ಸಮಾಜದಿಂದ ಬೇರ್ಪಡಿಸುವ ವಿಚಾರವನ್ನು ಪ್ರತಿಭಟಿಸುವುದು ಅವರ ಕರ್ತವ್ಯವಾಗುತ್ತದೆ. ಈ ಪ್ರತೀಕಾರದಲ್ಲಿ ಪ್ರಾಣ ಹೋದರೂ ಚಿಂತೆಯಿಲ್ಲ; ಈ ಪ್ರತೀಕಾರದ ವಿರುದ್ಧ ಆಕ್ಷೇಪಗಳ ಮಳೆಯೇ ಸುರಿಯಬಹುದು. ಅಸ್ಪೃಶ್ಯ ವರ್ಗವನ್ನು ಬೇರ್ಪಡಿಸುವ ವಿಚಾರದ ವಿರುದ್ಧ ಪ್ರತಿರೋಧಿಸುವುದೆಂದರೆ ಹಿಂದೂ ಸಮಾಜದಲ್ಲಿ ಅಸ್ಪೃಶ್ಯರಿಗೆ ಯಾವ ನಿರ್ಬಂಧವೂ ಇಲ್ಲದ ಪೂರ್ಣ ಸ್ವಾತಂತ್ರ್ಯವು ದೊರೆಯುವಂತೆ ಮಾಡುವುದೇ. ಈ ವಿಷಯದಲ್ಲಿ ವಿಶ್ವಾಸಘಾತ ಮಾಡಿದರೆ ನಮ್ಮ ಪ್ರಾಣಗಳನ್ನು ಕೆಲದಿನ ಮುಂದಕ್ಕೆ ಹಾಕಿದಂತೆ ಮಾತ್ರ. ಸಾಮಾಜಿಕ ರಾಜಕೀಯ–ನಾಗರಿಕತೆಯ ದೃಷ್ಟಿಯಿಂದ ಅಸ್ಪೃಶ್ಯ ವರ್ಗದ ಮೇಲೆ ಇಂದು ಆಗುತ್ತಿರುವ ಅನ್ಯಾಯಗಳ ಪರಿಮಾರ್ಜನೆಗಾಗಿ

